4

# ಕ್ರಿಸ್ತನ ದೇಹ

*"ನೀವು ಕ್ರಿಸ್ತನ ದೇಹವು, ಮತ್ತು ಒಬ್ಬೊಬ್ಬರಾಗಿ ಅದಕ್ಕೆ ಅಂಗಗಳಾಗಿದ್ದೀರಿ" (1 ಕೊರಿಂಥ 12:27).*

ಒಬ್ಬ ಮನುಷ್ಯನು ಒಂದು ಚಿಕ್ಕ ವಿಮಾನವನ್ನು ಒಂದು ಕಾರಿನಂತೆ ಉಪಯೋಗಿಸಲು ಪ್ರಯತ್ನಿಸಿದನೆಂದು ಕಲ್ಪಿಸಿಕೊಳ್ಳಿರಿ. ಅದನ್ನು ನಡೆಸಲು, ಮೂಲೆಗಳಲ್ಲಿ ತಿರುಗಿಸಲು, ಕಷ್ಟವಾಗುತ್ತದೆ, ಪ್ರಯಾಣಿಕರಿಗೆ ಆರಾಮದಾಯಕವಾಗಿರುವದಿಲ್ಲ. ನೆಲದ ಮೇಲೆ ಪ್ರಯಾಣ ಮಾಡಲು ಸರಿಯಾಗಿ ನಿರ್ಮಿಸಲ್ಪಟ್ಟಿರುವದಿಲ್ಲ. ಪ್ರಮುಖ ರಸ್ತೆಗಳ ಮೇಲಿನ ಸಂಚಾರಕ್ಕೆ ಸಂಪೂರ್ಣವಾಗಿ ಅಯೋಗ್ಯವಾದದ್ದಾಗಿದೆ. ಒಂದು ವಿಮಾನವನ್ನು ಕಾರಿನಂತೆ ಉಪಯೋಗಿಸಲು ಪ್ರತ್ಯೇಕಿಸಿಟ್ಟುಕೊಳ್ಳುವುದು ವಾಸ್ತವಿಕತೆಯಿಲ್ಲದ್ದಾಗುತ್ತದೆ ಯಾಕಂದರೆ ವಿಮಾನಕ್ಕೆ "ಅದರ ತಕ್ಕಂಥ ಗುಣಗಳು" ಇರುತ್ತವೆ. ಅದು ಈ ರೀತಿಯಲ್ಲಿ ಉಪಯೋಗಿಸಲು ನಿರ್ಮಿಸಲ್ಪಡಲಿಲ್ಲ, ಮತ್ತು ಅದರ ಅಂಥ ಉಪಯೋಗವು ಅದರ ಸ್ವಭಾವವನ್ನು ಉಲ್ಲಂಘಿಸಿದಂತಾಗುತ್ತದೆ.

ಹೊಸ ಒಡಂಬಡಿಕೆಯ ಸಭೆಯ ತಪ್ಪಾದ ಚಿತ್ರಗಳು ಬಹಳ ಸಲ ಹಿಡಿಯಲ್ಪಟ್ಟಿವೆ ಯಾಕಂದರೆ ಸಭೆಯ ಸ್ವಭಾವವು ತಪ್ಪಾಗಿ ಅರ್ಥಮಾಡಿಕೊಳ್ಳಲ್ಪಟ್ಟಿದೆ. ಆದುದರಿಂದ, ಸಭೆಯ "ಸಹಜವಾದ ಗುಣವನ್ನು" ಅರ್ಥಮಾಡಿಕೊಳ್ಳುವುದಕ್ಕಾಗಿ ಅದರ ಕಾರ್ಯ, ಉದ್ದೇಶ ಮತ್ತು ಜಗತ್ತಿನಲ್ಲಿ ಅದರ ಗುರುತನ್ನು ಸರಿಯಾಗಿ ಗ್ರಹಿಸಿಕೊಳ್ಳುವ ಅಗತ್ಯತೆಯಿದೆ.

ನಾವು ನೋಡಿದಂತೆ, ಸಭೆಗಾಗಿ ಹೊಸ ಒಡಂಬಡಿಕೆಯಲ್ಲಿ (ವಿಶೇಷವಾಗಿ ಪೌಲನ ಬರಹಗಳಲ್ಲಿ) ಪ್ರಮುಖ ವ್ಯಕ್ತಪಡಿಸುವಿಕೆಗಳಲ್ಲಿ ಒಂದು "ಕ್ರಿಸ್ತನದೇಹ" ಎಂಬುದು.[1] ಈ ಮಾತು ಸಭೆಯ ವ್ಯಾವಹಾರಿಕ ದೃಷ್ಟಾಂತದಂತೆ (1 ಕೊರಿಂಥ 12:23-26) ಮತ್ತು ಸಭೆಯ ಕಾರ್ಯಸಂಬಂಧದ ವಿವರಣೆಯಂತೆ (1 ಕೊರಿಂಥ 12:27) ಉಪಯೋಗಿಸಲ್ಪಟ್ಟಿದೆ. ಈ ಪದವನ್ನು ಸಭೆಯ ವಿವರಣೆಯಂತೆ ಗ್ರಹಿಸಿಕೊಳ್ಳದಿದ್ದರೆ ಹೊಸ ಒಡಂಬಡಿಕೆಯ ಸಭೆಯ ಸ್ವಭಾವವನ್ನು ಅರ್ಥಮಾಡಿಕೊಳ್ಳಲಿಕ್ಕಾಗುವುದಿಲ್ಲ.

ಸಭೆಗಾಗಿ ಈ ಹೊಸ ಒಡಂಬಡಿಕೆಯ ವಿವರಣೆಗೆ ಹೆಚ್ಚಿನ ಗಮನ ಕೊಡೋಣ. ಈ ವ್ಯಕ್ತಪಡಿಸುವಿಕೆಯು ಏನನ್ನು ಹೇಳುತ್ತದೆ?

## ಕ್ರಿಸ್ತನೊಂದಿಗೆ ಐಕ್ಯತೆ

ಮೊದಲನೆಯದಾಗಿ, ಈ ಪದವು ಕ್ರಿಸ್ತನೊಂದಿಗೆ ಐಕ್ಯತೆಯನ್ನು ಸೂಚಿಸುತ್ತದೆ. ಮಾರ್ಪಡುವಿಕೆಯು ಒಬ್ಬನು "ಕ್ರಿಸ್ತನಿಗೆ ಒಬ್ಬನ ನಿಷ್ಠೆಯನ್ನು ಪ್ರತಿಜ್ಞೆ ಮಾಡುವದಕ್ಕಿಂತ" ಹೆಚ್ಚಿನದಾಗಿದೆ. ಅದು ಒಬ್ಬನು ಕ್ರಿಸ್ತನ ಆತ್ಮಿಕ ದೇಹವನ್ನು ಪ್ರವೇಶಿಸುವಂತೆ

ಕ್ರಿಸ್ತನೊಂದಿಗೆ ಅದ್ವಿತೀಯವಾಗಿ ಐಕ್ಯತೆಗೊಳ್ಳುವುದಾಗಿದೆ.

ಕ್ರಿಸ್ತನ ಕಡೆಗೆ ಮಾರ್ಪಡುವ ವಿಧಾನದ ಒಂದು ಭಾಗವಾಗಿ ನಾವು ಕ್ರಿಸ್ತನಲ್ಲಿ ಬಾಪ್ತಿಸ್ಮ ಹೊಂದುತ್ತೇವೆ. "ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ಬಾಪ್ತಿಸ್ಮ ಮಾಡಿಸಿಕೊಂಡವರಾದ ನಾವೆಲ್ಲರು ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ಬಾಪ್ತಿಸ್ಮ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ?" (ರೋಮಾಪುರ 6:3) ಎಂದು ಪೌಲನು ಬರೆದನು. ಕ್ರಿಸ್ತನೊಂದಿಗೆ ಐಕ್ಯತೆಯಲ್ಲಿ ಇರುವದರ ವಿಚಾರವು ವಿಶೇಷವಾಗಿ ರೋಮಾಪುರ 6:4ರಲ್ಲಿ ಗಮನಿಸಲ್ಪಟ್ಟಿದೆ: "ಹೀಗಿರಲಾಗಿ ನಾವು ಬಾಪ್ತಿಸ್ಮ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ *ಆತನೊಂದಿಗೆ* ಹೂಣಲ್ಪಟ್ಟೆವು. ಆದದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಕೂಡ ಜೀವದಿಂದ ಎದ್ದು ಹೊಸಬರಾಗಿ ನಡೆದುಕೊಳ್ಳಬೇಕು." (ಒತ್ತಿ ಹೇಳಿದ್ದು ನನ್ನದು.) "... ಒಂದೇ ದೇಹವಾಗುವದಕ್ಕಾಗಿ ಒಂದೇ ಆತ್ಮನಲ್ಲಿ ಬಾಪ್ತಿಸ್ಮ ಮಾಡಿಸಿಕೊಂಡೆವು" (1 ಕೊರಿಂಥ 12:13) ಎಂದೂ ಸಹ ಪೌಲನು ಹೇಳಿದನು. ಹಾಗಾದರೆ, ಬಾಪ್ತಿಸ್ಮದಲ್ಲಿ ನಾವು ಆತನ ಆತ್ಮಿಕ ದೇಹದಲ್ಲಿ ನೆಡಲ್ಪಟ್ಟಂತೆ, ಕ್ರಿಸ್ತನೊಂದಿಗೆ ನಾವು ಅನ್ಯೋನ್ಯತೆಯಲ್ಲಿ ತರಲ್ಪಟ್ಟಿದ್ದೇವೆ.

ಈ ಏಕತೆಯು, ಕ್ರಿಸ್ತನೊಂದಿಗಿನ ಆತ್ಮಿಕ ಐಕ್ಯತೆಯನ್ನು ಮದುವೆಗೆ ಹೋಲಿಸಬಹುದು. ಒಬ್ಬ ಪುರುಷನು ಮತ್ತು ಒಬ್ಬ ಸ್ತ್ರೀ ಮದುವೆಯಲ್ಲಿ ಪ್ರವೇಶಿಸುವಾಗ, "ಇಬ್ಬರು ಜೀವನಕ್ಕಾಗಿ ಒಬ್ಬರಿಗೊಬ್ಬರು ಸಮರ್ಪಣೆ ಮಾಡಿಕೊಳ್ಳುವದಕ್ಕಿಂತ" ಹೆಚ್ಚಾದದ್ದು ಸಂಭವಿಸುತ್ತಲಿರುತ್ತದೆ. ಮದುವೆಯಲ್ಲಿ ಒಂದು ಐಕ್ಯತೆಯು ಸಂಭವಿಸುತ್ತದೆ - ಈ ಐಕ್ಯತೆಯು ಗಂಡ ಮತ್ತು ಹೆಂಡತಿಯು ಜೀವನಕ್ಕಾಗಿ "ಒಂದೇ ಶರೀರದಂತೆ" ಉಲ್ಲೇಖಿಸುವಷ್ಟು ಗಾಢವಾದದ್ದಾಗಿದೆ (ಎಫೆಸ 5:31). ದಂಪತಿಗಳನ್ನು ಕುರಿತು, "ಅವರು ಒಬ್ಬರಿಗೊಬ್ಬರು ವಚನ ಕೊಟ್ಟಿದ್ದಾರೆ" ಎಂದು ನಾವು ಆಗಾಗ ಹೇಳುತ್ತೇವೆ. ಬಹುಶಃ, "ಅವರು ಮದುವೆಯ ಐಕ್ಯತೆಯಲ್ಲಿ ಪ್ರವೇಶಿಸಿದ್ದಾರೆ" ಎಂದು ಹೇಳುವುದು ಹೆಚ್ಚು ಉತ್ತಮವಾಗಿದೆ. "ಐಕ್ಯತೆ" ಎಂಬ ಪದವು ಸತತವಾದ ಒಂದಾಗಿರುವಿಕೆಯನ್ನು ಹೇಳುತ್ತದೆ, ಮದುವೆಯು ಇಬ್ಬರು ಒಂದಾಗಿ ನಡೆಯಲು ಇಲ್ಲವೇ ಒಂದೇ ಮನೆಯಲ್ಲಿ ಜೀವಿಸಲು ಒಪ್ಪಿಕೊಳ್ಳುವದನ್ನು ಮಾತ್ರವೇ ಒಳಗೊಂಡಿರುವುದಿಲ್ಲ; ಮದುವೆಯ ಇಬ್ಬರು ಜೀವನಾಂತ್ಯದವರೆಗೆ ಒಂದಾಗಿರಲು, ವ್ಯಭಿಚಾರ ಇಲ್ಲವೇ ಮರಣ ಮಾತ್ರವೇ ನಾಶಮಾಡಬಲ್ಲ ವಿವಾಹ ಬಂಧನದಲ್ಲಿ ಒಂದಾಗಿ ಕೂಡಿಸಲ್ಪಡಲು ಒಂದು ಒಪ್ಪಂದವಾಗಿರುವದು. ಇಬ್ಬರು ಮದುವೆಯಲ್ಲಿ ಪ್ರವೇಶಿಸುವಾಗ ಅವರು ತಮ್ಮ ಸ್ವಂತ ದೇಹದ ಮೇಲಿನ ಅಧಿಕಾರವನ್ನೂ ಸಮರ್ಪಿಸಿಬಿಡುವಷ್ಟು ಇದು ಸತ್ಯವಾಗಿರುವದು. "ಹೆಂಡತಿಗೆ ಸ್ವಂತ ದೇಹದ ಮೇಲೆ ಅಧಿಕಾರವಿಲ್ಲ; ಅದು ಗಂಡನಿಗುಂಟು, ಹಾಗೆಯೇ ಪುರುಷನಿಗೆ ಸ್ವಂತ ದೇಹದ ಮೇಲೆ ಅಧಿಕಾರವಿಲ್ಲ; ಅದು ಹೆಂಡತಿಗುಂಟು" (1 ಕೊರಿಂಥ 7:4) ಎಂದು ಪೌಲನು ಬರೆದನು.

ಅದೇ ರೀತಿಯಲ್ಲಿ, ಮಾರ್ಪಡುವಿಕೆಯಲ್ಲಿ ನಾವು ಕ್ರಿಸ್ತನ ಆತ್ಮಿಕ ದೇಹಕ್ಕೆ ಕೂಡಿಸಲ್ಪಡುವಂತೆ, ಆತನೊಂದಿಗೆ ಐಕ್ಯತೆಯಲ್ಲಿ ಪ್ರವೇಶಿಸುವೆವು. ನಾವು ಕ್ರಿಸ್ತನೊಂದಿಗೆ ಒಂದಾಗುವೆವು - ಕ್ರಿಸ್ತನು ನಮ್ಮವನು ಮತ್ತು ನಾವು ಕ್ರಿಸ್ತನವರು. ನಮ್ಮ ಸ್ವಂತ ಜೀವನಗಳ ಮೇಲೆ ಇನ್ನೆಂದೂ ನಮಗೆ ಅಧಿಕಾರವಿರುವದಿಲ್ಲ; ನಾವು ಕ್ರಿಸ್ತನಿಗೆ ಒಳಪಟ್ಟಿದ್ದೇವೆ - ನಾವು ಆತನೊಂದಿಗೆ ಶಾಶ್ವತವಾದ ಏಕತೆಯಲ್ಲಿ ಜೀವಿಸುತ್ತೇವೆ (1 ಕೊರಿಂಥ 6:16).

# ಕ್ರಿಸ್ತನ ಮುಖಾಂತರ ಐಕ್ಯಮತ್ಯ

ಎರಡನೆಯದಾಗಿ, "ಕ್ರಿಸ್ತನ ದೇಹದಂತೆ" ಸಭೆಯ ವಿವರಣೆಯು ಕ್ರಿಸ್ತನ ಮುಖಾಂತರ ಐಕ್ಯಮತ್ಯವನ್ನು ಸೂಚಿಸುತ್ತದೆ. ಅದು ಸಭೆಯನ್ನು ಅನೇಕ ಅಂಗಗಳು ಒಂದೇ ದೇಹದಂತೆ ಒಟ್ಟಾಗಿ ಕಾರ್ಯಮಾಡುವ ದೇಹದಂತೆ ಚಿತ್ರಿಸುತ್ತದೆ.

"ಹೇಗೆ ದೇಹವು ಒಂದಾಗಿದ್ದರೂ ಅದಕ್ಕಿರುವ ಅಂಗಗಳು ಅನೇಕವಾಗಿವೆಯೋ, ಹೇಗೆ ದೇಹದ ಅನೇಕ ಅಂಗಗಳೆಲ್ಲವು ಅನೇಕವಾಗಿದ್ದು ಒಂದೇ ದೇಹವಾಗಿರುವದೋ, ಹಾಗೆಯೇ ಕ್ರಿಸ್ತನು" (1 ಕೊರಿಂಥ 12:12) ಎಂದು ಪೌಲನು ಬರೆದನು. ಅನೇಕ ಭಿನ್ನ ವಾದ ಅಂಗಗಳು ಕ್ರಿಸ್ತನ ಒಂದು ದೇಹವಾಗಿರುತ್ತವೆ. ಭೌತಿಕ ದೇಹದ ಬಗ್ಗೆ ಪೌಲನು ಹೇಳಿದ್ದನ್ನು ಸಭೆಯ ಬಗೆಗೂ ಹೇಳಬಹುದು: "ದೇಹವು ಒಂದೇ ಅಂಗವಲ್ಲ, ಅನೇಕ ಅಂಗಗಳುಳ್ಳದ್ದಾಗಿದೆ,"; "ಅವೆಲ್ಲವು ಒಂದೇ ಅಂಗವಾಗಿದ್ದರೆ ದೇಹವೆಲ್ಲಿರುವದು?" (1 ಕೊರಿಂಥ 12:14, 19). ಹೀಗೆ ಕ್ರೈಸ್ತರು ಕ್ರಿಸ್ತನ ದೇಹವಾಗಿರುವರು ಮತ್ತು ವೈಯಕ್ತಿಕವಾಗಿ ಅದರ ಸದಸ್ಯರಾಗಿರುವರು (1 ಕೊರಿಂಥ 12:27).

"ಕ್ರಿಸ್ತನ ದೇಹ" ಎಂಬುದು ನಾವು ಕ್ರಿಸ್ತನಿಗೆ ಒಳಪಟ್ಟಿದ್ದೇವೆ ಎಂಬುದನ್ನು ಸೂಚಿಸುವದಲ್ಲದೆ, ಭೌತಿಕ ದೇಹದ ಅಂಗಗಳು ಒಂದಕ್ಕೊಂದು ಒಳಪಟ್ಟಿರುವಂತೆ ನಾವೂ ಸಹ ಒಬ್ಬರಿಗೊಬ್ಬರು ಒಳಪಟ್ಟಿದ್ದೇವೆ ಎಂಬುದನ್ನೂ ಸೂಚಿಸುತ್ತದೆ. ದೇಹದ ಒಂದು ಅಂಗಕ್ಕೆ ನೋವಾದರೆ ಎಲ್ಲಾ ಅಂಗಗಳು ಸಹಾನುಭೂತಿ ತೋರಿಸಿ ನೋವನ್ನು ಅನುಭವಿಸುತ್ತವೆ. "ದೇಹದ" ತತ್ವದಿಂದ ಈ ತೀರ್ಮಾನಕ್ಕೆ ಬರುತ್ತೇವೆ: "ದೇಹದಲ್ಲಿ ಭೇದವೇನೂ ಇರದೆ ಅಂಗಗಳು ಒಂದಕ್ಕೊಂದರ ಹಿತವನ್ನು ಚಿಂತಿಸುವ ಹಾಗೆ ದೇವರು ಕೊರತೆಯುಳ್ಳದ್ದಕ್ಕೆ ಹೆಚ್ಚಾದ ಮಾನವನ್ನು ಕೊಟ್ಟು ದೇಹವನ್ನು ಹದವಾಗಿ ಕೂಡಿಸಿದ್ದಾನೆ. ಒಂದು ಅಂಗಕ್ಕೆ ನೋವಾದರೆ ಎಲ್ಲಾ ಅಂಗಗಳಿಗೂ ನೋವಾಗುತ್ತದೆ; ಒಂದು ಅಂಗಕ್ಕೆ ಮರ್ಯಾದೆ ಬಂದರೆ ಎಲ್ಲಾ ಅಂಗಗಳಿಗೂ ಸಂತೋಷವಾಗುತ್ತದೆ" (1 ಕೊರಿಂಥ 12:25, 26).

"ಕ್ರಿಸ್ತನ ದೇಹ" ಎಂಬ ವ್ಯಕ್ತಪಡಿಸುವಿಕೆಯು ಅರ್ಥಮಾಡಿಕೊಳ್ಳಲ್ಪಟ್ಟಾಗ, ಸಭಾಪಂಗಡತ್ವಕ್ಕಾಗಿ ತರ್ಕವು ನಾಶಪಡಿಸಲ್ಪಡುತ್ತದೆ, ಸಭಾಪಂಗಡತ್ವವು ಪ್ರತಿಯೊಂದಕ್ಕೆ ಭಿನ್ನವಾದ ಲಕ್ಷಣಗಳೂ ವಿಶ್ವಾಸಗಳೂ ಇರುವ ಭಿನ್ನವಾದ ದೇಹಗಳನ್ನು ಪ್ರತಿಪಾದಿಸುತ್ತದೆ. ಹೊಸ ಒಡಂಬಡಿಕೆಯ "ಕ್ರಿಸ್ತನ ದೇಹದ" ತತ್ವವು ಒಂದೇ ದೇಹವನ್ನು, ಕ್ರಿಸ್ತನ ದೇಹವನ್ನು, ಪ್ರತಿಯೊಬ್ಬ ಕ್ರೈಸ್ತನನ್ನು ಅದರ ಸದಸ್ಯನಂತೆ, ಎಲ್ಲಾ ಇತರ ಸದಸ್ಯರನ್ನು ಪ್ರೀತಿಸುವಂತೆ ಮತ್ತು ಆ ದೇಹದ ಇತರ ಪ್ರತಿಯೊಬ್ಬ ಸದಸ್ಯನಿಗಾಗಿ ನೋಡಿಕೊಳ್ಳುವಂತೆ ಚಿತ್ರಿಸುತ್ತದೆ. ಹೊಸ ಒಡಂಬಡಿಕೆಯ ಸಭೆಯು ಕ್ರಿಸ್ತನ ದೇಹವಾಗಿದ್ದರೆ, ಸಭಾಪಂಗಡತ್ವವು "ಸಭೆಗಾಗಿ" ದೇವರ ನಕ್ಷೆಯಾಗಿರುವದಿಲ್ಲ; ಸಭಾಪಂಗಡತ್ವವು ಸರಿಯಾಗಿದ್ದರೆ, ಹೊಸ ಒಡಂಬಡಿಕೆಯ ಸಭೆಯು ಕ್ರಿಸ್ತನ ಒಂದು ದೇಹವಾಗಿರುವದಿಲ್ಲ.

ತಾನು ಅಲ್ಲಗಳೆಯಲ್ಪಟ್ಟು, ಹಿಡಿಯಲ್ಪಡುವ ರಾತ್ರಿಯಲ್ಲಿ ಯೇಸುವು ತನ್ನಲ್ಲಿ ಅನಂತರ ನಂಬುವದರ ಐಕ್ಯತೆಗಾಗಿ ಪ್ರಾರ್ಥಿಸಿದನು (ಯೋಹಾನ 17:21-24). ಪಂಚಾಶತ್ತಮದ ದಿನದಂದು, ಆತನು ಸತ್ತವರೊಳಗಿಂದ ಪುನರುತ್ಥಾನ ಹೊಂದಿದನಂತರ, ಆತನು ತನ್ನ ಭೂಲೋಕದ ದೇಹದಂತೆ ಸಭೆಯನ್ನು ಸ್ಥಾಪಿಸಿದನು. ಅದಕ್ಕಾಗಿ ಆತನು ಪ್ರಾರ್ಥಿಸಿದ ಐಕ್ಯತೆಯನ್ನು ಅದು ಸೃಷ್ಟಿಸುವದು ಮತ್ತು ಮುಂದರಿಸಿಕೊಂಡು ಹೋಗುವುದು. ಕ್ರಿಸ್ತನ ದೇಹವನ್ನು ನಾವು ಪ್ರವೇಶಿಸುವಂತೆ, ದೇಹದ ಎಲ್ಲಾ ಸದಸ್ಯರೊಂದಿಗೆ ಒಂದು ಐಕ್ಯತೆಯಲ್ಲಿ ನಾವು ಪ್ರವೇಶಿಸುವೆವು. ವಿಭಾಗಿಸುವ ಎಲ್ಲಾ ಗೋಡೆಗಳು ಒಡೆಯಲ್ಪಟ್ಟಿವೆ:

“ನೀವೆಲ್ಲರು ಕ್ರಿಸ್ತನ ಯೇಸುವಿನಲ್ಲಿ ಒಂದೇ ಆಗಿರುವದರಿಂದ ಯೆಹೂದ್ಯನು ಗ್ರೀಕನು ಎಂದೂ, ಆಳು ಒಡೆಯ ಎಂದೂ, ಗಂಡು ಹೆಣ್ಣು ಎಂದೂ ಭೇದವಿಲ್ಲ” (ಗಲಾತ್ಯ 3:28).

ಕ್ರಿಸ್ತನ ದೇಹದ ಸದಸ್ಯರಿಂದ ಅನುಭವಿಸಿದ ಐಕ್ಯತೆಯು ಭೌತಿಕ ದೇಹದ ಅಂಗಗಳ ಐಕ್ಯತೆಗೆ ಸಮವಾಗಿರುವುದು - ಒಂದಾಗಿ ಕೆಲಸಮಾಡುವ ಐಕ್ಯತೆ, ಒಬ್ಬರನ್ನೊಬ್ಬರು ಪ್ರೀತಿಸುವ ಐಕ್ಯತೆ, ಒಬ್ಬರಿಗೊಬ್ಬರು ಸಹಾನುಭೂತಿ ತೋರಿಸುವುದು. ಭೌತಿಕ ದೇಹದ ಯಾವುದೇ ಅಂಗವು ಇತರ ಯಾವುದೇ ಅಂಗದೊಂದಿಗೆ ಸ್ಪರ್ಧಿಸುವದಿಲ್ಲ. ಪ್ರತಿಯೊಂದು ಅಂಗವು ಇತರ ಎಲ್ಲಾ ಅಂಗಗಳೊಂದಿಗೆ ಕೆಲಸಮಾಡುವುದು ಮತ್ತು ಐಕ್ಯಗೊಂಡ ದೇಹದಂತೆ ಕಾರ್ಯಮಾಡುವ ಸಹಕಾರಗೊಂಡ ಕಾರ್ಯವನ್ನು ಉತ್ಪಾದಿಸುವುದು.

ಯೇಸುವು ತನ್ನ ಜನರಿಗೆ ಎಂದಾದರೂ ಮಾಡಿದ ಚಿನ್ನಹವು ಅವರು ಭೂಲೋಕ ದಲ್ಲಿ ಆತನ ಆತ್ಮಿಕ ದೇಹವಾಗಿರಬೇಕೆಂಬುದು. ಎಲ್ಲಾ ವಿಧಗಳ ಮತ್ತು ಹೆಸರುಗಳ ಸಭಾಪಂಗಡಗಳಾಗಿರಬೇಕೆಂದು ಆತನು ಅವರನ್ನು ಕೇಳಿಕೊಳ್ಳಲಿಲ್ಲ ಆತನಿಗೆ ನಿಷ್ಠೆಯು ನಾವು ಆತನ ಒಂದೇ ಆತ್ಮಿಕ ದೇಹವಾಗಿರುವ ಆತನ ಬೇಡಿಕೆಯನ್ನು ಪೂರೈಸುವದರಿಂದ ಆತನನ್ನು ಗೌರವಿಸಬೇಕೆಂಬದನ್ನು ಹೇಳುತ್ತದೆ.

## ಕ್ರಿಸ್ತನಿಗಾಗಿ ಉಪಯುಕ್ತತೆ

ಮೂರನೆಯದಾಗಿ, ಸಭೆಯ “ದೇಹ” ವಿವರಣೆಯು ಕ್ರಿಸ್ತನಿಗಾಗಿ ಉಪಯುಕ್ತತೆಯನ್ನು ಇಲ್ಲವೇ ಪ್ರಯೋಜನವನ್ನು ಸೂಚಿಸುತ್ತದೆ. ಜಗತ್ತಿನಲ್ಲಿ ಕ್ರಿಸ್ತನ ಕಾರ್ಯವು ಯಾವ ರೀತಿಯಲ್ಲಿ ಇರಬೇಕೆಂಬುದನ್ನು ಅನ್ವಯಿಸುತ್ತದೆ.

ತನ್ನ ಜೀವನ ಮತ್ತು ಸೇವೆಯ ಬಗ್ಗೆ, ಪೌಲನು, “ನನಗಂತೂ ಬದುಕುವದಂದರೆ ಕ್ರಿಸ್ತನೇ ...” (ಫಿಲಿಪ್ಪಿ 1:21) ಎಂದು ಹೇಳಿದನು. ಅವನು ಯಾವುದೇ ಸಭಾಪಂಗಡವನ್ನಾಗಲೀ ಇಲ್ಲವೇ ಯಾವುದೇ ಇತರ ಮಾನವ ನಿರ್ಮಿತ ಗುಂಪನ್ನಾಗಲೀ ಇಲ್ಲವೇ ಸಂಘಟನೆಯನ್ನಾಗಲೀ ಪ್ರತಿನಿಧೀಕರಿಸಲಿಲ್ಲ; ಕ್ರಿಸ್ತನ ಆತ್ಮಿಕ ದೇಹದ ಒಬ್ಬ ಸದಸ್ಯನಂತೆ ಅವನು ಜನರ ಮುಂದೆ ನಿಂತುಕೊಂಡನು: “ನಾವು ಕ್ರಿಸ್ತನ ರಾಯಭಾರಿಗಳಾಗಿದ್ದೇವೆ. ದೇವರೇ ನಮ್ಮ ಮೂಲಕ ಬುದ್ಧಿ ಹೇಳುವ ಹಾಗಾಯಿತು. ದೇವರೊಂದಿಗೆ ಸಮಾಧಾನವಾಗಿರೆಂದು ಕ್ರಿಸ್ತನ ಹೆಸರಿನಲ್ಲಿ ನಿಮ್ಮನ್ನು ಬೇಡಿಕೊಳ್ಳುತ್ತೇನೆ” (2 ಕೊರಿಂಥ 5:20). ಪೌಲನು ತನ್ನ ಬಾಧೆಗಳು ಕ್ರಿಸ್ತನ ದೇಹಕ್ಕಾಗಿ ಇರುವವೆಂದು ತಿಳಿದುಕೊಂಡನು: “ನಾನು ಈಗ ನಿಮಗೋಸ್ಕರ ಅನುಭವಿಸುತ್ತಿರುವ ಬಾಧೆಗಳಲ್ಲಿ ಸಂತೋಷಪಟ್ಟು ಕ್ರಿಸ್ತನ ಸಂಕಟಗಳೊಳಗೆ ಇನ್ನೂ ಉಳಿದದ್ದನ್ನು ಸಭೆಯೆಂಬ ಆತನ ದೇಹಕ್ಕೋಸ್ಕರ ನನ್ನ ಶರೀರದಲ್ಲಿ ಅನುಭವಿಸಿ ತೀರಿ ಸುತ್ತೇನೆ” (ಕೊಲೊಸ್ಸೆ 1:24).

ಭೂಲೋಕದಲ್ಲಿ ಕ್ರಿಸ್ತನ ಕಾರ್ಯವು ಹೇಗೆ ಕೈಕೊಳ್ಳಲ್ಪಡಬೇಕು? ಈಗ ಕ್ರಿಸ್ತನ ಪರಲೋಕದಲ್ಲಿ ತಂದೆಯ ಬಲಗಡೆಯಲ್ಲಿ ಇರುವುದರಿಂದ ಭೂಲೋಕದ ಸೇವೆಯು ಹೇಗೆ ಮುಂದುವರಿಸಲ್ಪಡಬೇಕು. ಈ ಪ್ರಶ್ನೆಗಳಿಗೆ ಸರಳವಾದ ಉತ್ತರವು “ಕ್ರಿಸ್ತನ ದೇಹದ ಮುಖಾಂತರ” ಎಂದಾಗಿರುತ್ತದೆ. ಸಭೆಯನ್ನು ಸ್ಥಾಪಿಸುವದರೊಂದಿಗೆ, ಯೇಸುವು ಭೂಲೋಕದೊಳಗೆ ಸೇವೆ ಮಾಡುವ ಮತ್ತು ಜಗತ್ತನ್ನು ಪ್ರೀತಿಸುವ ಸಾಧನವಾಗಿ ತನ್ನ ಆತ್ಮಿಕ ದೇಹವನ್ನು ಕಳುಹಿಸಿದನು.

ಹೊಸ ಒಡಂಬಡಿಕೆಯು ತಲೆಯಿಲ್ಲದ ದೇಹದ ಬಗ್ಗೆ ಇಲ್ಲವೇ ದೇಹವಿಲ್ಲದ ತಲೆಯಬಗ್ಗೆ ಮಾತಾಡುವದಿಲ್ಲ. ಭೂಮಿಯ ಮೇಲೆ ಯಾವುದೇ ಕ್ರೈಸ್ತನು ಅಸ್ತಿತ್ವದಲ್ಲಿ ಇಲ್ಲದಿದ್ದರೆ, ಕ್ರಿಸ್ತನಿಗೆ ಮಾರ್ಗದರ್ಶನ ಮಾಡಲು, ನಿರ್ದೇಶಿಸಲು, ಇಲ್ಲವೇ ಆತನ ಕಾರ್ಯಮಾಡಲು ಯಾರೂ ಇರುತ್ತಿರಲಿಲ್ಲ. ಕ್ರೈಸ್ತರು ಕ್ರಿಸ್ತನ ಕಡೆಗೆ ತಮ್ಮ ಸಂಪೂರ್ಣ ಅಧಿಕಾರದಂತೆ ಮತ್ತು ಮಾರ್ಗದರ್ಶಿಯಂತೆ ನೋಡಿರದಿದ್ದರೆ, ಸಭೆಯು ಶಿರಸ್ಸಿಲ್ಲದ ದೇಹವಾಗುತ್ತಿತ್ತು. ಯೇಸುವು ತನ್ನ ಸಭೆಯ ಶಿರಸ್ಸಾಗಿದ್ದಾನೆ, ಮತ್ತು ಆತನ ಸಭೆಯು ಭೂಲೋಕದಲ್ಲಿ ಆತನ ಚಿತ್ತಕ್ಕೆ ಒಪ್ಪಿಸಿಕೊಟ್ಟ ಹಾಗೂ ಇಲ್ಲಿ ಆತನ ಕಾರ್ಯಮಾಡುವವರಂತೆ ಕಾರ್ಯಮಾಡುವ ಜನರಿಂದ ಮಾಡಲ್ಪಟ್ಟಿರುತ್ತದೆ.

ಕ್ರೈಸ್ತರು ಆತನ ಕಾರ್ಯಮಾಡುವದಕ್ಕಾಗಿ ಕ್ರಿಸ್ತನ ಆತ್ಮಿಕ ದೇಹವಾಗಿದ್ದಾರೆ. ಲೋಕದ ಅಗತ್ಯತೆಗಳನ್ನು ನೋಡಲಿಕ್ಕೆ ನಾವು ಆತನ ಕಣ್ಣುಗಳಾಗಿದ್ದೇವೆ. ಮಾನವನ ಕೊರತೆಯನ್ನು ನೋಡದೇ ಮತ್ತು ಅದಕ್ಕಾಗಿ ಸೇವೆಮಾಡದಿದ್ದರೆ, ಆತನ ಆತ್ಮಿಕ ದೇಹದ ಕಣ್ಣುಗಳು ದೃಷ್ಟಿಯಿಲ್ಲದ ಕಣ್ಣುಗಳಾಗುವವು. ನಾವು ಆತನ ವಾಕ್ಯಕ್ಕೆ ಕಿವಿಕೊಡಲು ಮತ್ತು ಆತನ ಮಾರ್ಗದರ್ಶನಗಳನ್ನು ಕೈಕೊಳ್ಳಲು ನಾವು ಆತನ ಕಿವಿಗಳಾಗಿರುವೆವು. ಕ್ರಿಸ್ತನ ಆತ್ಮಿಕ ದೇಹವು ಆತನ ಚಿತ್ತಕ್ಕೆ ಕಿವುಡಾದದ್ದಾಗಿದ್ದರೆ ಅದು ಎಷ್ಟು ದುಃಖಕರವಾದದ್ದಾಗುತ್ತಿತ್ತು. ಆತನ ವಾಕ್ಯವನ್ನು ಮಾತಾಡುವದಕ್ಕೆ ಮತ್ತು ಜಗತ್ತಿನಲ್ಲಿ ಆತನ ಸ್ತೋತ್ರಗಳನ್ನು ಹಾಡಲಿಕ್ಕೆ ನಾವು ಆತನ ನಾಲಿಗೆಯಾಗಿದ್ದೇವೆ. ಇಂಥ ಸಮಯದಲ್ಲಿ ಕ್ರಿಸ್ತನ ದೇಹವು ಮಾತಿಲ್ಲದ್ದಾಗಿದ್ದರೆ ಅದು ಆತನ ಹೃದಯವನ್ನು ಒಡೆಯುವಂಥದ್ದಾಗಿರುತ್ತದೆ. ಭಾರಗಳನ್ನೂ ಜವಾಬ್ದಾರಿಕೆಗಳನ್ನೂ ಹೊತ್ತುಕೊಂಡು ಹೋಗಲು ನಾವು ಆತನ ಭುಜಗಳಾಗಿರುತ್ತೇವೆ. ಕ್ರಿಸ್ತನು ನಮಗೆ ಕೊಡಬಹುದಾದ ಯಾವುದೇ ಜವಾಬ್ದಾರಿ ಕಾರ್ಯಗಳನ್ನು ನಾವು ಕೈಕೊಳ್ಳಲಿಕ್ಕಾಗುವಂತೆ ಆತನ ಸಭೆಯು ಆರೋಗ್ಯವುಳ್ಳದ್ದೂ ಬಲವಾದದ್ದೂ ಆಗಿರಬೇಕೆಂದು ಆತನು ಬಯಸುತ್ತಾನೆ. ಜಗತ್ತಿನಲ್ಲಿ ಆತನ ಕಾರ್ಯಗಳನ್ನು ಮಾಡಲಿಕ್ಕೆ ಓಡಲು ನಾವು ಆತನ ಪಾದಗಳಾಗಿರುತ್ತೇವೆ. ನಾವು ಆತನ ಪಾದಗಳನ್ನು ಬಲವುಳ್ಳವುಗಳನ್ನಾಗಿಯೂ ಮತ್ತು ಆತನಿಗಾಗಿ ಓಡಲು ತ್ವರಿತವುಳ್ಳವುಗಳನ್ನಾಗಿಯೂ ಕಾಪಾಡತಕ್ಕದ್ದು. ಸೇವೆಮಾಡಲು ನಾವು ಆತನ ಉದಾರ ಹಸ್ತಗಳಾಗಿರಬೇಕು. ಆತನ ಕೈಗಳು ಸೇವೆಗಾಗಿ ಪೂರ್ಣವಾದವುಗಳೂ, ದಕ್ಷವಾದವುಗಳೂ, ಸಮರ್ಪಿತವಾದವುಗಳೂ ಆಗಿರುವಂತೆ ನಿಶ್ಚಿತತೆ ಮಾಡಿಕೊಳ್ಳಬೇಕು.

ಕ್ರಿಸ್ತನ ಆತ್ಮಿಕ ದೇಹದ ಉಪಯುಕ್ತತೆಯನ್ನು ಪ್ರತಿಭೆಯನ್ನು ಮತ್ತು ಕಾರ್ಯಶೀಲತೆಯನ್ನು ಕುರಿತು ಯೋಚಿಸಿರಿ. ಯಾವುದೇ ಸಮಯದಲ್ಲಿ ಯಾವುದೇ ಸ್ಥಳದಲ್ಲಿ ಯಾರಾದರೂ ಒಬ್ಬ ಕ್ರೈಸ್ತನಾದರೆ, ಅವನು ಕ್ರಿಸ್ತನ ಕೆಲಸ ಮಾಡಲು ಮತ್ತು ಆತನ ಪ್ರೀತಿಯನ್ನು ಪ್ರಕಟಿಸಲು ಕ್ರಿಸ್ತನ ದೇಹದ ಕಾರ್ಯಾಚರಣೆಯ ಸದಸ್ಯನಾಗುವನು. ಈ ಸಾಧನದಿಂದ, ಅವನು ಕ್ರಿಸ್ತನ ಸೇವೆಯನ್ನು ಕೈಕೊಳ್ಳುವದನ್ನು ಮುಂದುವರಿಸುವನು. ಅವನು ಕ್ರಿಸ್ತನೊಂದಿಗೆ ಒಂದಾಗಿರುವನು ಮತ್ತು ಆತನ ದೇಹದ ಇತರ ಎಲ್ಲಾ ಸದಸ್ಯರೊಂದಿಗೆ ಒಂದಾಗಿರುವನು. ಹೀಗೆ, ಕ್ರಿಸ್ತನ ಸಭೆಯ ಐಕ್ಯತೆಯು ಜಗತ್ತಿಗೆ ಪ್ರಸಿದ್ಧಿಯಾಗಿರುವದು. ಪ್ರತಿಯೊಬ್ಬ ಕ್ರೈಸ್ತನು ತನ್ನನ್ನು ಸಭೆಗೆ ಬೈಬಲ್ ಉಲ್ಲೇಖಿಸುವ ಮಾರ್ಗದಲ್ಲಿಯೇ ಸಂಬಂಧಿಸಿಕೊಳ್ಳುವನು. ತನ್ನ ಮಾರ್ಗದರ್ಶನಕ್ಕಾಗಿ ಅವನು ಯಾವುದೇ ಭೂಲೋಕದ ಮುಖ್ಯ ಕಚೇರಿಯ ಕಡೆಗೆ ನೋಡುವುದಿಲ್ಲ; ದೇಹದ ಶಿರಸ್ಸಾದ ಕ್ರಿಸ್ತನ ಕಡೆಗೆ ಮಾತ್ರವೇ ಅವನು ನೋಡುತ್ತಾನೆ. ಪರಿಣಾಮವಾಗಿ, ಎಲ್ಲಾ ಗೌರವವೂ ಮಹಿಮೆಯೂ ಕ್ರಿಸ್ತನಿಗೆ ಕೊಡಲ್ಪಡುತ್ತದೆ. ಇದು ಎಷ್ಟು ಸರಳವಾಗಿದೆ, ಆದಾಗ್ಯೂ "ಕ್ರಿಸ್ತನ ದೇಹವು" ಹೇಗೆ ಜಾಣತನದ್ದೂ ಪರಿಣಾಮ ಕಾರಿಯಾದದ್ದೂ

ಆಗಿದೆಯಲ್ಲವೇ!

ನಮ್ಮ ಮಿತಿಯುಳ್ಳ ಮಾನವ ಬುದ್ಧಿವಂತಿಕೆಗೂ, "ಕ್ರಿಸ್ತನ ದೇಹದ" ತತ್ವವು ಅರ್ಥಮಾಡಿಕೊಡುತ್ತದೆ. ಅದು ಸಾಕಷ್ಟಾದದ್ದೂ ಕಾರ್ಯಮಾಡುವಂಥದ್ದೂ ವ್ಯಾವ ಹಾರಿಕವಾದದ್ದೂ ಆಗಿರುತ್ತದೆ. ಅದು ದೇವರ ಜ್ಞಾನವನ್ನೂ ಮಹಿಮೆಯನ್ನೂ ಪ್ರತಿಬಿಂಬಿಸುತ್ತದೆ.

ಕ್ರಿಸ್ತನ ಮಹಿಮೆಗಾಗಿ ಕ್ರಿಸ್ತನ ದೇಹದಂತೆ ಕ್ರಿಸ್ತನ ಕಾರ್ಯವನ್ನು ಮಾಡೋಣ.

## ಮುಕ್ತಾಯ

ಭೂಲೋಕದಲ್ಲಿ ಸಭೆಯು ಕ್ರಿಸ್ತನ ದೇಹವಾಗಿದೆ. ಈ ಸತ್ಯದ ಕಾರಣದಿಂದ, ರೋಮ್ ಪಟ್ಟಣದಲ್ಲಿಯ ಕ್ರೈಸ್ತರಿಗೆ ಪೌಲನು ಹೀಗೆ ಹೇಳಿದನು: "ನಮಗೆ ಒಂದೇ ದೇಹದಲ್ಲಿ ಬಹಳ ಅಂಗಗಳಿರಲಾಗಿ ಆ ಎಲ್ಲಾ ಅಂಗಗಳಿಗೆ ಹೇಗೆ ಒಂದೇ ಕೆಲಸ ಇರುವದಿಲ್ಲವೋ ಹಾಗೆಯೇ ನಾವೆಲ್ಲರೂ ಒಟ್ಟಾಗಿ ಕ್ರಿಸ್ತನಲ್ಲಿ ಒಂದೇ ದೇಹವಾಗಿದ್ದು ಒಬ್ಬೊಬ್ಬರಾಗಿ ಪರಸ್ಪರ ಅಂಗಗಳಾಗಿದ್ದೇವೆ" (ರೋಮಾಪುರ 12:4, 5). ಕ್ರೈಸ್ತರಾಗುವದರಲ್ಲಿ ನಾವು ಕ್ರಿಸ್ತನೊಂದಿಗೆ ಅನ್ಯೋನ್ಯತೆಯಲ್ಲಿ, ಕ್ರಿಸ್ತನ ಮೂಲಕವಾಗಿ ಒಬ್ಬರು ಇತರರೊಂದಿಗೆ ಅನ್ಯೋನ್ಯತೆಯಲ್ಲಿ, ಮತ್ತು ಕ್ರಿಸ್ತನಿಗಾಗಿ ಉಪಯುಕ್ತತೆಯಲ್ಲಿ, ಪ್ರಯೋಜನಕ್ಕಾಗಿ ಪ್ರವೇಶಿಸುತ್ತೇವೆ.

ಡಿಪಾರ್ಟ್‌ಮೆಂಟಲ್ ಸ್ಟೋರಿನ ಕಿಟಕಿಯ ಬಳಿಯಲ್ಲಿ ಇರುವ ಬೊಂಬೆಗೂ ಮಾನವ ಜೀವಿಗೂ ಮಧ್ಯದಲ್ಲಿ ಎಷ್ಟೋ ಭಿನ್ನತೆ ಇರುತ್ತದೆಯಲ್ಲವೇ! ಬೊಂಬೆಗೆ ಜೀವವಿರುವದಿಲ್ಲ ಆದರೆ ರೂಪವಿರುತ್ತದೆ. ಅದಕ್ಕೆ ಹೊರಭಾಗ, ಒಂದು ದೇಹ ಇರುತ್ತದೆ, ಆದರೆ ಒಳಭಾಗ ಇರುವದಿಲ್ಲ; ಆತ್ಮವಿರುವದಿಲ್ಲ. ಅದೊಂದು ಕೇವಲ ಪ್ರತಿರೂಪವಾಗಿದೆ, ಅದು ನಿಜವಾದದ್ದಾಗಿರದೇ, ಕೃತ್ರಿಮವಾದ ಪ್ರತಿನಿಧಿಯಾಗಿರುತ್ತದೆ. ಮಾನವ ಜೀವಿಗೆ ರೂಪವಿದೆ, ಆತ್ಮವಿದೆ ಮತ್ತು ಜೀವವಿದೆ; ಅವನು ದೇಹದಲ್ಲಿ ಮತ್ತು ಆತ್ಮದಲ್ಲಿ ಕೃತ್ರಿಮಯಿಲ್ಲದವನಾಗಿದ್ದಾನೆ. ಅವನಿಗೆ ದೇಹವಿದೆ, ಆತ್ಮಯಿದೆ ಮತ್ತು ಮನಸ್ಸು ಇದೆ. ಅವನು ಯೋಚಿಸಬಹುದು, ಭಾವಿಸಬಹುದು, ಪ್ರೀತಿಸಬಹುದು ಮತ್ತು ವಿಧೇಯನಾಗಬಹುದು.

ಬೊಂಬೆಯ ಹಾಗೂ ಮಾನವ ಜೀವಿಯ ಮಧ್ಯದಲ್ಲಿ ಇರುವ ಭಿನ್ನತೆಯು ಮಾನವ ನಿರ್ಮಿತ ಸಂಘಟನೆಯ ಹಾಗೂ ಕ್ರಿಸ್ತನ ದೇಹದ ಮಧ್ಯದಲ್ಲಿಯ ಭಿನ್ನತೆಯನ್ನು ಉದಾಹರಿಸುತ್ತದೆ. ಮಾನವ ಸಂಘಟನೆಗೆ ರೂಪವಿದೆ, ಆದರೆ ದೇವರು ಅದರಲ್ಲಿ ವಾಸಿಸುವದಿಲ್ಲ; ಅದರಲ್ಲಿ ಮನುಷ್ಯನು ಮಾತ್ರವೇ ವಾಸಿಸುತ್ತಾನೆ. ಮಾನವನ ಸಂಘಟನೆಯು ಸಾಧಿಸಲು ಹುಡುಕುವಂಥದ್ದೆಲ್ಲವೂ ಮಾನವನ ಸಾಮರ್ಥ್ಯ ಮತ್ತು ಜ್ಞಾನದಿಂದ ಮಾತ್ರವೇ ಮಾಡಲ್ಪಡಬೇಕಾಗುವುದು. ಕ್ರಿಸ್ತನ ದೇಹವು ಆತ್ಮನಿಂದ ವಾಸಿಸಲ್ಪಡುತ್ತದೆ, ದೇವರ ಜೀವದಿಂದ ಸಜೀವಿಯಾಗಿರುತ್ತದೆ, ಮತ್ತು ಕ್ರಿಸ್ತನಿಂದಲೇ ಮಾರ್ಗದರ್ಶನ ಹೊಂದುತ್ತದೆ ಮತ್ತು ನಿರ್ದೇಶಿಸಲ್ಪಡುತ್ತದೆ.

ಹೊಸ ಒಡಂಬಡಿಕೆಯ ಸಭೆಯು ಕ್ರಿಸ್ತನ ದೇಹವಾಗುತ್ತದೆ. ಪ್ರತಿಯೊಬ್ಬ ಅಧಿಕೃತ ಕ್ರೈಸ್ತನು ಅದರ ಸದಸ್ಯನಾಗಿರುತ್ತಾನೆ. ಅದು ಒಂದು ಸಂಘಟನೆಯೊಂದಿಗಿರುವದಿಲ್ಲ, ಆದರೆ ಅದು ಕ್ರಿಸ್ತನ ಆತ್ಮದೊಂದಿಗೆ ಸಜೀವ ದೇಹವಾಗಿದೆ. ಅದು ಕ್ರಿಸ್ತನಿಂದ ನಡಿಸಲ್ಪಡುತ್ತದೆ, ಆತನು ಅದರ ಶಿರಸ್ಸಾಗಿದ್ದಾನೆ. ಈ ಜಗತ್ತಿನಲ್ಲಿ ಅದರ ಉದ್ದೇಶವು ಕ್ರಿಸ್ತನ ಮಹಿಮೆಗಾಗಿ ಜೀವಿಸುವುದೂ ಸೇವೆ ಮಾಡುವುದೂ ಆಗಿರುತ್ತದೆ.

ನೀನು ಕ್ರಿಸ್ತನ ದೇಹದ ಸದಸ್ಯನಾಗಿರುವಿಯೋ?

---

ಟಿಪ್ಪಣಿ

[1]ಅನುಬಂಧ 3, ಹೊಸ ಒಡಂಬಡಿಕೆಯಲ್ಲಿ "ಕ್ರಿಸ್ತನ ದೇಹ" ಎಂಬ ಎಲ್ಲಾ ಪದಗಳ ಕಂಡು ಬರುವಿಕೆಯನ್ನು ಒಳಗೊಂಡಿದೆ. ಯಾದಿಯೂ ಈ ಪದದ ಉಪಯೋಗವನ್ನು ಅಧ್ಯಯನ ಮಾಡಲು ಮತ್ತು ಸಭೆಯು ಈ ಸ್ವಭಾವದ ಮಹತ್ವದ ವಿಷಯವನ್ನು ಯೋಚಿಸಲು ಸಹಾಯ ಮಾಡುವುದು.

---

## ಅಧ್ಯಯನಕ್ಕಾಗಿ ಮತ್ತು ಚರ್ಚೆಗಾಗಿ ಪ್ರಶ್ನೆಗಳು

1. ಸಭೆಯೊಂದಿಗೆ ಸಂಬಂಧಿಸಿ ಉಪಯೋಗಿಸಲ್ಪಟ್ಟ "ಕ್ರಿಸ್ತನ ದೇಹ" ಎಂಬ ಮಾತಿನ ಎರಡು ವಿಧಗಳನ್ನು ಚರ್ಚಿಸಿರಿ.
2. ಕ್ರಿಸ್ತನೊಳಗೆ ನಮ್ಮ ಬಾಪ್ತಿಸ್ಮವನ್ನು ಕ್ರಿಸ್ತನೊಂದಿಗೆ ಐಕ್ಯವಾಗಿರುವದರ ಮಾತುಗಳಲ್ಲಿ ವಿವರಿಸಿರಿ.
3. ಕ್ರಿಸ್ತನೊಳಗೆ ಬರುವದನ್ನು ಕುರಿತು ರೋಮಾಪುರ 6:3 ಏನು ಹೇಳುತ್ತದೆ?
4. ಕ್ರಿಸ್ತನೊಂದಿಗೆ ನಮ್ಮ ಐಕ್ಯತೆಯನ್ನು ಮದುವೆಯಲ್ಲಿಯ ಒಂದಾಗುವಿಕೆಯೊಂದಿಗೆ ಹೋಲಿಸಿರಿ.
5. ಕ್ರಿಸ್ತನೊಂದಿಗೆ ಐಕ್ಯತೆಯ ಬಗ್ಗೆ ರೋಮಾಪುರ 6:4 ಏನು ಹೇಳುತ್ತದೆ.
6. ಕ್ರಿಸ್ತನನ್ನು ನಾವು ಹೇಗೆ ಪ್ರವೇಶಿಸುವೆವೆಂದು 1 ಕೊರಿಂಥ 12:13 ಹೇಳುತ್ತದೆ?
7. ಕ್ರಿಸ್ತನ ದೇಹದ, ಸಭೆಗಳ ಇಲ್ಲವೇ ಕ್ರೈಸ್ತರ ಸದಸ್ಯರು ಯಾರು?
8. ಒಬ್ಬರೊಂದಿಗೊಬ್ಬರ ನಮ್ಮ ಸಂಬಂಧವನ್ನು ಕುರಿತು "ಕ್ರಿಸ್ತನ ದೇಹ" ಎಂಬ ಮಾತು ಏನನ್ನು ಸೂಚಿಸುತ್ತದೆ?
9. ಕ್ರಿಸ್ತನ ದೇಹದ ಐಕ್ಯತೆಯ ತತ್ವವನ್ನು ಸಂಬಂಧಿಸಿ ಸಭಾಪಂಗಡವನ್ನು ಚರ್ಚಿಸಿರಿ.
10. ಕ್ರಿಸ್ತನಲ್ಲಿ ನಮ್ಮ ಐಕ್ಯತೆಯ ಬಗ್ಗೆ ಗಲಾತ್ಯ 3:28 ಏನನ್ನು ಹೇಳುತ್ತದೆ?
11. ಜಗತ್ತಿನಲ್ಲಿ ಕ್ರಿಸ್ತನ ಕಾರ್ಯವು ಯಾವ ವಿಧದಲ್ಲಿ ಮಾಡಲ್ಪಡಬೇಕು?
12. ಸಭೆಯು ಶಿರಸ್ಸು ಇಲ್ಲದ ದೇಹವಾಗಿರುವುದೋ ಇಲ್ಲವೇ ದೇಹವಿಲ್ಲದ ಶಿರಸ್ಸಾಗಿರುವುದೋ?
13. ಜಗತ್ತಿನಲ್ಲಿ ಕ್ರಿಸ್ತನ ದೇಹದಂತೆ ನಾವು ಹೇಗೆ ಕಾರ್ಯಮಾಡಬಹುದು?
14. ಸಭೆ ಮತ್ತು "ಕ್ರಿಸ್ತನ ದೇಹ" ಒಂದೇಯಾಗಿರುವವೋ?
15. ಸಂಘಟನೆ ಮತ್ತು ಶರೀರ ರಚನೆ ಇವುಗಳನ್ನು ಹೋಲಿಸಿರಿ ಮತ್ತು ವ್ಯತ್ಯಾಸ ತಿಳಿಸಿರಿ.

© 2009 Truth for Today